# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 408/2016
CW-01 PW-01

ಹೆಸರು : ಬಸವರಾಜ ಪಾಟೀಲ

ತಂದೆ ಹೆಸರು : ರೇವಣಸಿದ್ದಪ್ಪಾ

ವಯಸ್ಸು : 52 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಹೇರೂರ (ಕೆ) ಗ್ರಾಮ, ತಾಃಜಿಃಕಲಬುರಗಿ ಹಾ.ವಃ ಕಲಬುರಗಿ

---

**<u>ಪ್ರಮಾಣವಚನ ಭೋಧಿಲಾಯಿತು. ದಿಃ 01-08-2023</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ನನಗೆ ಚಾಸಾಃ 06 ರಿಂದ 14 ರವರ ಪರಿಚಯ ಇರುತ್ತದೆ. ಅದೇ ರೀತಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ನನಗೆ ಇರುತ್ತದೆ.

ಸುಮಾರು 4-5 ವರ್ಷಗಳ ಹಿಂದೆ ಕನ್ನಡಗಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಹುಂಡಿ ಪೆಟ್ಟಿಗೆ ಕಳುವಾಗಿತ್ತು. ಸದರಿ ವಿಷಯವನ್ನು ನಾನು ಪೊಲೀಸರಿಗೆ ತಿಳಿಸಿ, ಒಂದು ದೂರನ್ನು ನೀಡಿರುತ್ತೇನೆ.

ಸದರಿ ಹುಂಡಿ ಪೆಟ್ಟಿಗೆಯಲ್ಲಿ ಸುಮಾರು ಎರಡರಿಂದ ಮೂರು ಲಕ್ಷ ರೂಪಾಯಿ ಇದ್ದಿರಬಹುದು. ಸದರಿ ಹುಂಡಿ ಪೆಟ್ಟಿಗೆಯನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

ಪೊಲೀಸರು ನನ್ನನ್ನು ಯಾವತ್ತು ಪೊಲೀಸ ಠಾಣೆಗೆ ಕರೆಸಿರುವುದಿಲ್ಲ ಮತ್ತು ಕಳುವು ಮಾಡಿದ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ ಮತ್ತು ಯಾವುದೇ ಹೇಳಿಕೆಯನ್ನು ನನ್ನಿಂದ ಪಡೆದಿರುವುದಿಲ್ಲ.

ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತವೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>**

ದಿಃ 07-06-2016 ರಂದು ರಾತ್ರಿ 10.00 ರಿಂದ ದಿಃ 08-06-2016 ರ ಬೆಳಿಗಿನ ಜಾವ 05.30 ಅವಧಿಯಲ್ಲಿ ಚಾಸಾಃ 12 ಮತ್ತು 13 ರವರು ಪ್ರತಿದಿವಸದಂತೆ ದೇವರ ಪೂಜೆಗೆಂದು ದಿಃ 08-06-2016 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ಕನ್ನಡಗಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಬಂದಾಗ, ದೇವಸ್ಥಾನದ ಹುಂಡಿ ಪೆಟ್ಟಿಗೆಯನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿ.

ನಾನು ದಿಃ 11-06-2016 ರಂದು ಪೊಲೀಸರಿಗೆ ಈ ಪ್ರಕರಣದಲ್ಲಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ.

ದಿಃ 31-08-2016 ರಂದು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಪೊಲೀಸರು ವಿಚಾರಣೆ ಮಾಡಿ, ಸದರಿ ಆರೋಪಿಗಳು ದೇವಸ್ಥಾನದ ಹುಂಡಿ ಒಡೆದು ಅದರಲ್ಲಿರುವ ಹಣವನ್ನು ತಾವೇ ಕಳ್ಳತನ ಮಾಡಿದ್ದರು ಎಂದು ಒಪ್ಪಿಕೊಂಡ ನಂತರ, ಪೊಲೀಸರು ನನ್ನ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 31-08-2016 ರಂದು ಪೊಲೀಸರಿಗೆ ನಾನು " ನಾನು ದಿಃ 11-06-2016 ರಂದು ತಮ್ಮ ಮುಂದೆ ಫಿರ್ಯಾದಿ ಅರ್ಜಿ ನೀಡಿದ್ದೇನೆಂದರೆ ------------------- ನಾನು ಸದರಿಯವರಿಗೆ ನೋಡಿ ವಿಚಾರಿಸಿ, ಗುರುತಿಸಿದ್ದು, ನಿಜವಿರುತ್ತದೆ " ಈ ರೀತಿಯಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಪುರವಣಿ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಜಿ.ಎಸ್. ವಕೀಲರಿಂದ - ಏನು ಇಲ್ಲಾ**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.